ಉದ್ದೇಶಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯವರನ್ನು ಒಳಗೊಂಡಂತೆ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚಿಸಿ ಈ ಸಮಿತಿಯ ಮುಖೇನ ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಎಲ್ಲಾ ಸಿದ್ದತೆಗಳನ್ನು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡಲಾಗಿದೆ. ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಉಪ ಸಮಿತಿಗಳನ್ನು ರಚಿಸಿ ಇವುಗಳ ಮುಖೇನ ಪರಿಣಾಮಕಾರಿಯಾಗಿ ರೈತರ ತೋಟಗಳಲ್ಲಿ ನುಸಿ ಭಾದೆ ಹತೋಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಬೇಕಾದ ಪ್ರತಿಯೊಂದು ಅಂಶದ ಬಗ್ಗೆ ವಿವರವಾದ ತಾಂತ್ರಿಕ ಸೂಚನೆಗಳನ್ನು ಒಳಗೊಂಡಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದ್ಯದಲ್ಲಿ ನುಸಿ ಭಾದಿತ ಎಲ್ಲಾ ಜಿಲ್ಲೆಗಳಲ್ಲಿ ಹತೋಟಿ ಕಾರ್ಯಕ್ರಮವು ಈಗಾಗಲೇ ಜಾರಿಗೊಳಿಸಿದ್ದು, ತ್ವರಿತಗತಿಯಲ್ಲಿ ಮುಂದುವರಿಯುತ್ತಿದೆ. ಒಟ್ಟಿನಲ್ಲಿ ಸರ್ಕಾರವು ನುಸಿ ಭಾದೆ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ನುಸಿ ಭಾದೆಯನ್ನು ಹತೋಟಿಗೆ ತರಲು ಬೇಕಾದ ಎಲ್ಲಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಂಡು ರಾಜ್ಯದಲ್ಲಿ ತೆಂಗು ಬೆಳೆಯನ್ನು ರಕ್ಷಿಸಿ ರೈತರ ಹಿತಾಸಕ್ತಿಯನ್ನು ಕಾಪಾಡಲು ಬದ್ಧವಾಗಿದೆ ಮತ್ತು ಈ ದಿಸೆಯಲ್ಲಿ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿದೆ.

ನೈಸರ್ಗಿಕ ವಿಕೋಪದಿಂದ ಆಗಿರುವ ನಷ್ಟ

459 - ಶ್ರೀ ಬಚ್ಚೇಗೌಡ ಬಿ.ಎಸ್. (ಹೊಸಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ತೊಂದರೆಯಾದ ಪ್ರದೇಶಗಳಿಗೆ ಇದುವರೆವಿಗೂ ಪ್ರಕೃತಿ ವಿಕೋಪದ ನಿಧಿಯಿಂದ ಸರ್ಕಾರ ಕೊಟ್ಟಿರುವ ಹಣ ಎಷ್ಟು? (ಮೂರು ವರ್ಷಗಳ ವಿವರ ನೀಡುವುದು).*

ಆ) *ಕೇಂದ್ರ ಸರ್ಕಾರದಿಂದ ನೈಸರ್ಗಿಕ ವಿಕೋಪದ ಹಾನಿಗೆ ಇದುವರೆಗೆ ಪಡೆದಿರುವ ಹಣ ಎಷ್ಟು?*

ಇ) *ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಖರ್ಚು ಮಾಡಿರುವ ಹಣವೆಷ್ಟು? ಅದಕ್ಕೆ ಮಾರ್ಗಸೂಚಿ ಏನು?*

ಈ) *ನೈಸರ್ಗಿಕ ವಿಕೋಪದಿಂದ ಆಗಿರುವ ಒಟ್ಟು ನಷ್ಟ ಎಷ್ಟು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ವಿವರ ಈ ಕೆಳಕಂಡಂತಿದೆ.

(ರೂ ಲಕ್ಷಗಳಲ್ಲಿ)

ವರ್ಷ	ಅತಿವೃಷ್ಟಿ ಪರಿಹಾರ	ಅನಾವೃಷ್ಟಿ ಪರಿಹಾರ
1997-98	1885.33	4957.96
1998-99	7501.00	2221.15
1999-2000	7021.32	1885.00
ಒಟ್ಟು	16407.65	9064.11

ಆ) ಕೇಂದ್ರ ಸರ್ಕಾರದಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿಯ ವರ್ಷಾವಾರು ಬಿಡುಗಡೆ ಮಾಡಲಾದ ಅನುದಾನ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವರ್ಷ	ಸಿ.ಆರ್.ಎಫ್	ಎನ್.ಎಫ್.ಸಿ.ಆರ್.
1997-98	3312.00	2200.00
1998-99	3481.00	9998.00
1999-2000	3629.00	-

ಇ) ನೈಸರ್ಗಿಕ ವಿಕೋಪ ಪರಿಹಾರಕ್ಕೆ ವಿವಿಧ ಜಿಲ್ಲಾಧಿಕಾರಿಗಳಿಂದ ಮಾಡಲಾದ ಖರ್ಚಿನ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

1997-98	9650.68
1998-99	8920.00
1999-2000	3714.07
	(1/2000 ದ ಅಂತ್ಯಕ್ಕೆ)

ಮಾರ್ಗ ಸೂಚಿ	ಪರಿಹಾರ
1) ಮಾನವ ಜೀವ ಹಾನಿ	ರೂ. 1.00 ಲಕ್ಷ (ಪ್ರತಿ ಕುಟುಂಬಕ್ಕೆ)
2) ಮಾನವ-ಗಾಯಗೊಂಡವರಿಗೆ	ರೂ. 10,000-00
3) ಪ್ರಾಣ ಜೀವ ಹಾನಿ	ಹಾನಿಯ 50 ಅಥವಾ ರೂ. 3000 ಗರಿಷ್ಠ ;
4) ಕೃಷಿ ಬೆಳೆ ಹಾನಿ	ಪ್ರತಿ ಹೆಕ್ಟೇರ್‌ಗೆ, ರೂ. 500-00 ಗರಿಷ್ಠ ರೂ. 2000
5) ಮನೆ ಹಾನಿ	ಭಾಗಶ : ರೂ. 5000, ಪೂರ್ಣಹಾನಿ ರೂ. 10,000
6) ವೈಯಕ್ತಿಕ ಸ್ವತ್ತುಗಳು ಹಾನಿಯ ಶೇ	50 ಅಥವಾ 3000-00 ಗರಿಷ್ಠ.
7) ಆಹಾರ ಧಾನ್ಯ ಹಾನಿ ರೂ	500 ಗರಿಷ್ಠ ರೂ 2000-00.

ಈ) ನೈಸರ್ಗಿಕ ವಿಕೋಪದಿಂದ 99-2000 ಸಾಲಿನಲ್ಲಿ ಒಟ್ಟು ಹಾನಿ ರೂ 46159.43 ಲಕ್ಷ.